

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**,ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 05–10–2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರದ ಖುತ್‌ಬದಲ್ಲಿ ಸಹಾಬರ ಬಗ್ಗೆ ಪ್ರಸ್ತಾಪಿಸುವಾಗ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದರಿಗೆ ಸಂಬಂಧಿಸಿ ಕೆಲವು ವರದಿಗಳು ಬಾಕಿಯಾಗಿದ್ದುವು. ಅವುಗಳನ್ನು ಈ ದಿನ ವಿವರಿಸುವೆನು. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದರ ಬಗ್ಗೆ ಹಿರಿಯ ಸಹಾಬರು ಹೀಗೆ ಹೇಳುತ್ತಿದ್ದರು: ಅಲ್ಲಾಹನೊಂದಿಗೆ ಸಂಬಂಧ ಮತ್ತು ಸಾಮೀಪ್ಯ ಸ್ಥಾಪಿಸುವುದರಲ್ಲಿ ಅಬ್ದುಲ್ಲಾ ಬಿನ್ ಮಸ್‌ಊದ್ ಅಸಾಧಾರಣ ಸ್ಥಾನವನ್ನು ಹೊಂದಿದ್ದರು ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವ ಸಹಾಬರ ಉದಾಹರಣೆಗಳನ್ನು ದಾರಿದೀಪವನ್ನಾಗಿ ಮಾಡಿಕೊಳ್ಳಲು ವಿಶಿಷ್ಟವಾಗಿ ಹೇಳಿದುದು, ಅಂತಹ ಸಹಾಬರಲ್ಲಿ ಹಝ್ರತ್ ಅಬೂಬಕರ್, ಹಝ್ರತ್ ಉಮರ್‌ರವರೊಂದಿಗೆ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಸೇರಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳುತ್ತಿದ್ದರು: ಅಬ್ದುಲ್ಲಾ ಬಿನ್ ಮಸ್‌ಊದ್‌ರ ಮಾದರಿಯನ್ನು ಬಲಿಷ್ಠವಾಗಿ ಹಿಡಿದುಕೊಳ್ಳಿರಿ ಎಂದು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅವರ ಬಗ್ಗೆ ವಿಶಿಷ್ಟವಾದ ನಂಬಿಕೆ ಇತ್ತು. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದರಿಗೆ ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಅಸಾಮಾನ್ಯವಾದ ಪ್ರೀತಿ ಇತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹವಾಸ ಅವರನ್ನು ಮುತ್ತಖಿಯನ್ನಾಗಿಯೂ ಆರಾಧನೆಯನ್ನು ಅನುಷ್ಠಿಸುತ್ತಾ ಜೀವಿಸುವವನನ್ನಾಗಿಯೂ ಮಾಡಿತ್ತು. ಅವರಿಗೆ ಆರಾಧನೆ ಮತ್ತು ನಫ್ಲ್‌ಗಳ ಬಗ್ಗೆ ಎಂತಹ ಆಸಕ್ತಿ ಇತ್ತೆಂದರೆ ಫರ್ಝ್ ನಮಾಝ್‌ಗಳನ್ನೂ ತಹಜ್ಜುದ್ ನಮಾಝ್‌ಗಳನ್ನೂ ಅನುಷ್ಠಿಸುತ್ತಿದ್ದರಲ್ಲದೆ ಸೂರ್ಯೋದಯದ ನಂತರದ ನಮಾಝ್ ಸಹ ಅನುಷ್ಠಿಸುತ್ತಿದ್ದರು. ಅವರು ಪ್ರತಿ ಸೋಮವಾರ ಮತ್ತು ಗುರುವಾರ ನಫ್ಲ್ ಉಪವಾಸ ಅನುಷ್ಠಿಸುತ್ತಿದ್ದರು. ಅವರು ಹೇಳುತ್ತಿದ್ದರು: ತಹಜ್ಜುದ್ ಮೊದಲಾದ ನಮಾಝ್‌ಗಳನ್ನು ಅನುಷ್ಠಿಸುವುದರಿಂದ ಶರೀರದಲ್ಲಿ ಬಲಹೀನತೆ ತಲೆದೋರುತ್ತದೆ. ಆದುದರಿಂದ ನಾನು ಕಡಿಮೆ ಸಂಖ್ಯೆಯಲ್ಲಿ ನಫ್ಲ್ ಉಪವಾಸ ನಿರ್ವಹಿಸುತ್ತಿದ್ದೇನೆ. ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದರೊಂದಿಗೆ ಭಾಷಣ ಮಾಡಲು ಹೇಳಿದರು. ಆಗ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಪ್ರಾರಂಭಿಕ ಪ್ರಾರ್ಥನೆಗಳ ನಂತರ ಇಷ್ಟು ಮಾತ್ರ ಹೇಳಿದರು: ಓ ಜನರೇ, ಅಲ್ಲಾಹನು ನಮ್ಮ ಪರಿಪಾಲಕ (ರಬ್ಬ್) ಆಗಿದ್ದಾನೆ. ಪವಿತ್ರ ಖುರ್‌ಆನ್ ನಮಗೆ ಮಾರ್ಗದರ್ಶನ ನೀಡುವ ಗ್ರಂಥವಾಗಿದೆ. ಬೈತುಲ್ಲಾ (ಕಅಬ) ನಮ್ಮ ಖಿಬ್ಲ ಆಗಿದೆ ಮತ್ತು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮ ನಬಿ (ಪ್ರವಾದಿ) ಆಗಿದ್ದಾರೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಇಬ್ನು ಮಸ್‌ಊದ್ ಸತ್ಯವನ್ನೇ ಹೇಳಿದ್ದಾರೆ. ಅವರು ಏನನ್ನು ಇಷ್ಟಪಡುತ್ತಾರೋ ಅದನ್ನು ನನ್ನ ಸಮುದಾಯದ ಜನರಿಗೆ ನಾನು ಸಹ ಇಷ್ಟಪಡುತ್ತೇನೆ.

ಹಝ್ರತ್ ಅಲಿ ಕೂಫ ನಗರಕ್ಕೆ ಹೋದಾಗ ಅವರಿದ್ದ ಸಭೆಯಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದರ ಬಗ್ಗೆ ಪ್ರಸ್ತಾಪವಾಗಿತ್ತು. ಅವರು ಹಿಂದೆ ಆ ನಗರದಲ್ಲಿ ಸ್ವಲ್ಪಕಾಲ ಜೀವಿಸಿದ್ದರು. ಜನರು ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದರನ್ನು ಪ್ರಶಂಸಿಸುತ್ತಾ ಹೇಳಿದರು: ಓ ಅಮೀರುಲ್ ಮೂಮಿನೀನ್, ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದರಿಗಿಂತ ಉನ್ನತವಾದ ಸ್ವಭಾವ ಗುಣಗಳನ್ನು ಹೊಂದಿದ, ಮೃದುವಾಗಿ ಉಪದೇಶಿಸುವ, ಅತ್ಯುತ್ತಮವಾಗಿ ಸಹವಾಸ ಮಾಡುವ, ಸಭೆ ಜರಗಿಸುವ, ಅತ್ಯಂತ ಹೆಚ್ಚು ದೇವಭಯವುಳ್ಳ ಬೇರೆ ಯಾರನ್ನೂ ನಾವು ಕಂಡಿಲ್ಲ. ಆಗ ಹಝ್ರತ್ ಅಲಿ ಹೇಳಿದರು: ನಾನು ಸಹ ಅಬ್ದುಲ್ಲಾ ಬಿನ್ ಮಸ್‌ಊದರ ಬಗ್ಗೆ ಇಂತಹ ಅಭಿಪ್ರಾಯಗಳನ್ನೇ ಹೊಂದಿದ್ದೇನೆ. ಅಷ್ಟುಮಾತ್ರವಲ್ಲ ಅದಕ್ಕಿಂತ ಉತ್ತಮವಾದ ಅಭಿಪ್ರಾಯವನ್ನು ಹೊಂದಿದ್ದೇನೆ.

ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ತನ್ನ ದೀನೀ ಸಹೋದರ ಹಝ್ರತ್ ಝುಬೈರ್ ಬಿನ್ ಅಲ್ ಅವಾಮ್‌ರೊಂದಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ಥಾಪಿಸಿದ ಸಹೋದರ ಸಂಬಂಧವನ್ನು ಚೆನ್ನಾಗಿ ನಿರ್ವಹಿಸಿದರು. ಅವರ ಬಗ್ಗೆ ಪರಿಪೂರ್ಣವಾದ ನಂಬುಗೆಯನ್ನು ಹೊಂದಿ ಹೀಗೆ ಮರಣಶಾಸನ ನೀಡಿದರು: ನನ್ನ ಎಲ್ಲಾ ಸಾಂಪತ್ತಿಕ ವ್ಯವಹಾರಗಳ ಮೇಲ್ವಿಚಾರಕರಾಗಿ ಹಝ್ರತ್ ಝುಬೈರ್ ಬಿನ್ ಅಲ್ ಅವಾಮ್ ಮತ್ತು ಅವರ ಪುತ್ರ ಅಬ್ದುಲ್ಲಾ ಬಿನ್ ಝುಬೈರ್‌ರನ್ನು ನೇಮಿಸಿದ್ದೇನೆ. ಕುಟುಂಬಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅವರ ತೀರ್ಮಾನಗಳು ಅಂತಿಮವೂ ಜಾರಿಗೊಳಿಸಲ್ಪಡಲೇ ಬೇಕಾದವುಗಳೂ ಆಗುವುವು.

ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಹೇಗೆ ಅನುಸರಿಸುತ್ತಿದ್ದರು ಎಂಬುದರ ಬಗ್ಗೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: ಹದೀಸಿನಲ್ಲಿ ಹೀಗೆ ವರದಿಯಾಗಿದೆ. ಒಮ್ಮೆ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಭೆಗೆ ಬರುತ್ತಿದ್ದರು. ಅವರು ಇನ್ನೂ ರಸ್ತೆಯಲ್ಲಿಯೇ ಇದ್ದಾಗ ಅವರ ಕಿವಿಗಳಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು 'ಕುಳಿತುಕೊಳ್ಳಿರಿ' ಎಂದು ಆಜ್ಞಾಪಿಸಿದುದು ಕೇಳಿಸಿತು. ಈ ಶಬ್ದ ಆಲಿಸಿದ ತಕ್ಷಣ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್

ಅಲ್ಲೇ ಕುಳಿತುಕೊಂಡರು. ಅನಂತರ ಕುಳಿತುಕೊಂಡ ಸ್ಥಿತಿಯಲ್ಲಿಯೇ ಅವರು ಮಕ್ಕಳು ನಡೆಯುವ ಹಾಗೆ ಕಾಲೆಳೆಯುತ್ತಾ ಮಸ್‌ಜಿದನ್ನು ತಲಪಿದರು. ಅನುಸರಣೆಯ ಆತ್ಮವೇ ಸಮುದಾಯಗಳನ್ನು ಜಯಶಾಲಿಗಳನ್ನಾಗಿ ಮಾಡುತ್ತವೆ ಎಂಬ ರಹಸ್ಯವನ್ನು ಅರಿಯದ ಒಬ್ಬ ವ್ಯಕ್ತಿ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದರು ಆ ರೀತಿ ಮಸ್‌ಜಿದ್ ಕಡೆಗೆ ಚಲಿಸಿದ್ದನ್ನು ಕಂಡು ಆಕ್ಷೇಪಿಸಿದನು: ನೀವು ಎಂತಹ ತಿಳಿಗೇಡಿಯಾಗಿ ವರ್ತಿಸಿದಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಜ್ಞೆ ನೀಡಿದುದು ಮಸ್‌ಜಿದ್‌ನ ಅಂಚುಗಳಲ್ಲಿ ನಿಂತವರು ಕುಳಿಕೊಳ್ಳಬೇಕು ಎಂದಾಗಿತ್ತು. ಆದರೆ ನೀವು ರಸ್ತೆಯ ಮಧ್ಯದಲ್ಲಿಯೇ ಕುಳಿತು ಬಿಟ್ಟಿರಿ ಮತ್ತು ಕಾಲೆಳೆಯುತ್ತಾ ಮಸ್‌ಜಿದ್‌ಗೆ ಬಂದಿರಿ. ನೀವು ಮಸ್‌ಜಿದನ್ನು ತಲಪಿದ ನಂತರ ಕುಳಿತುಕೊಳ್ಳಬೇಕಾಗಿತ್ತು. ರಸ್ತೆ ಮಧ್ಯದಲ್ಲಿ ಕುಳಿತುಕೊಳ್ಳುವುದರ ಪ್ರಯೋಜನವಾದರೂ ಏನು? ಆಗ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹೀಗೆ ಉತ್ತರ ನೀಡಿದರು. ನೀವು ಹೇಳಿದ ಹಾಗೆ ಮಾಡಬಹುದಾಗಿತ್ತು. ಆದರೆ ಮಸ್‌ಜಿದ್ ತಲಪುವ ಮೊದಲೇ ನಾನು ಮೃತನಾಗುತ್ತಿದ್ದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಆಜ್ಞೆ ನಾನು ಪಾಲಿಸಿದವನಾಗುತ್ತಿರಲಿಲ್ಲ. ಕನಿಷ್ಠ ಒಂದು ಆಜ್ಞೆಯನ್ನು ನಾನು ಪಾಲಿಸಿಲ್ಲ ಎಂದಾಗುತ್ತಿತ್ತು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಬರೆಯುತ್ತಾರೆ: ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದರಿಗೆ ಸಂಬಂಧಿಸಿದ ಒಂದು ಘಟನೆ ಹೀಗಿದೆ: ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು ತಮ್ಮ ಖಿಲಾಫತ್ ಕಾಲದಲ್ಲಿ ಹಜ್ ಸಂದರ್ಭದಲ್ಲಿ ಮಕ್ಕ ನಗರದಲ್ಲಿ ನಾಲ್ಕು ರಕಅತ್ ನಮಾಝ್ ಅನುಷ್ಠಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಜ್‌ಗೋಸ್ಕರ ಮಕ್ಕಕ್ಕೆ ಆಗಮಿಸಿದಾಗ ಎರಡು ರಕ್‌ಅತ್ ನಮಾಝ್ ಮಾತ್ರ ಅನುಷ್ಠಿಸುತ್ತಿದ್ದರು. ಏಕೆಂದರೆ ಪ್ರಯಾಣಿಕರು ಎರಡು ರಕಅತ್ ನಮಾಝ್ ನಿರ್ವಹಿಸಬೇಕೆಂಬ ಆಜ್ಞೆ ಇದೆ. ಹಝ್ರತ್ ಉಸ್ಮಾನ್ ನಾಲ್ಕು ರಕಅತ್ ನಮಾಝ್ ಅನುಷ್ಠಿಸಿದಾಗ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸುನ್ನತನ್ನು (ನಡೆವಳಿಕೆಯನ್ನು) ಬದಲಾಯಿಸಿದರು ಎಂಬ ವದಂತಿ ಉಂಟಾಯಿತು. ಜನರು ಹಝ್ರತ್ ಉಸ್ಮಾನರ ಸಮೀಪಕ್ಕೆ ಬಂದು ನೀವು ನಾಲ್ಕು ರಕಅತ್ ನಮಾಝ್ ಅನುಷ್ಠಿಸಿದ್ದು ಏಕೆ? ಎಂದು ಕೇಳಿದರು. ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು ಹೇಳಿದರು: ನಾನು ಒಂದು ನಿರ್ಧಾರ ಮಾಡಿದೆನು. ಈಗ ದೂರ ದೂರ ಪ್ರದೇಶಗಳ ಜನರು ಮುಸ್ಲಿಮರಾಗುತ್ತಿದ್ದಾರೆ. ಬಹಳ ಜನರು ಹಜ್‌ಗೋಸ್ಕರ ದೂರ ಪ್ರದೇಶಗಳಿಂದ ಆಗಮಿಸುತ್ತಿದ್ದಾರೆ. ಅವರಲ್ಲಿ ಬಹುತೇಕ ಜನರಿಗೆ ಇಸ್ಲಾಮಿನ ಬಗ್ಗೆ ಸಾಕಷ್ಟು ಜ್ಞಾನ ಹಿಂದಿನ ಕಾಲದ ಜನರಿಗೆ ಲಭಿಸಿದಷ್ಟು ಲಭಿಸಿರುವುದಿಲ್ಲ. ಅವರು ಈಗ ಕೇವಲ ನಮ್ಮ ಕರ್ಮಗಳನ್ನು ನೋಡುತ್ತಿದ್ದಾರೆ. ನಾವು ಏನು ಮಾಡುತ್ತಿದ್ದೇವೆ ಎಂದು ಅವರು ನೋಡುತ್ತಾರೆ. ಹಳೆಯ ಮುಸ್ಲಿಮರು ವರ್ತಿಸುವ ರೀತಿಯಲ್ಲಿ ಅವರು ಅನುಕರಣೆ ಮಾಡುತ್ತಾರೆ ಮತ್ತು ಹೇಳುತ್ತಾರೆ, ಇಸ್ಲಾಮಿನ ಆಜ್ಞೆ ಹೀಗೆಯೇ ಇದೆ ಎಂದು. ಈ ಜನರು ಮದೀನಕ್ಕೆ ಹೆಚ್ಚು ಸಂಖ್ಯೆಯಲ್ಲಿ ಆಗಮಿಸುವುದಿಲ್ಲ. ಅವರಿಗೆ ಅಲ್ಲಿ ವಾಸಿಸಿ ನಮ್ಮ ನಮಾಝ್ ಅನುಷ್ಠಾನ ಹೇಗಿದೆ ಎಂದು ತಿಳಿಯುವ ಸಂದರ್ಭ ಸಿಗುವುದಿಲ್ಲ. ನಾನು ಹೀಗೆ ಯೋಚಿಸಿದೆ: ಈ ಜನರು ನಾನು ಎರಡು ರಕಅತ್ ನಮಾಝ್ ಅನುಷ್ಠಿಸುವುದನ್ನು ಕಂಡರೆ ಅವರು ತಮ್ಮ ಸ್ಥಳಗಳಿಗೆ ಹೋದಾಗ ಹೇಳುವರು, ಖಲೀಫರು ಎರಡು ರಕಅತ್ ನಮಾಝ್ ಅನುಷ್ಠಿಸಲು ನೇತೃತ್ವ ವಹಿಸಿದರು. ಆದುದರಿಂದ ಇಸ್ಲಾಮ್ ಧರ್ಮದ ಮೂಲ ತತ್ವ ಎರಡು ರಕಅತ್ ನಮಾಝ್ ಅನುಷ್ಠಿಸುವ ಬಗ್ಗೆಯಾಗಿದೆ ಎಂದು ಹೇಳುವರು. ಆದರೆ ಎರಡು ರಕಅತ್ ನಮಾಝ್ ಪ್ರಯಾಣದ ಕಾರಣದಿಂದ ಎಂಬ ವಿಷಯ ಅವರಿಗೆ ತಿಳಿದಿರುವುದಿಲ್ಲ. ಆದುದರಿಂದ ಇಸ್ಲಾಮಿನಲ್ಲಿ ಭಿನ್ನಾಭಿಪ್ರಾಯಗಳು ತಲೆದೋರುವುವು. ಮತ್ತು ಜನರಿಗೆ ತಪ್ಪು ಗ್ರಹಿಕೆಯುಂಟಾಗುವುದು. ಆದುದರಿಂದ ನಾನು ನಾಲ್ಕು ರಕಅತ್ ನಮಾಝ್ ಅನುಷ್ಠಿಸಲು ನಿರ್ಧರಿಸಿದೆ. ಆ ಮೂಲಕ ನಮಾಝ್‌ನಲ್ಲಿ ನಾಲ್ಕು ರಕಅತ್ ಅನುಷ್ಠಿಸುವ ಬಗ್ಗೆ ಆ ಜನರು ಮರೆತು ಬಿಡದಿರಲಿ ಎಂದು ನಾನು ನಿರ್ಧರಿಸಿದೆ. ಅದೂ ಅಲ್ಲದೆ ನಾಲ್ಕು ರಕಅತ್ ನಮಾಝ್ ಅನುಷ್ಠಿಸಲು ಇನ್ನೊಂದು ಕಾರಣವೇನೆಂದರೆ ನಾನು ಇಲ್ಲಿ ವಿವಾಹವಾಗಿರುವೆನು. ಆದುದರಿಂದ ನನ್ನ ಪತ್ನಿಯ ಊರು ನನ್ನ ಊರೇ ಆಗಿರುತ್ತದೆ. ಆದುದರಿಂದ ನಾನು ಪ್ರಯಾಣಿಕನಲ್ಲ. ನಾನು ಖಸ್ರ್ ಮಾಡದೆ ಪೂರ್ಣವಾಗಿ ನಮಾಝ್ ಅನುಷ್ಠಿಸಬೇಕೆಂದು ನಿರ್ಧರಿಸಿದೆ.

ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು ತಾನು ನಾಲ್ಕು ರಕಅತ್ ನಮಾಝ್ ಅನುಷ್ಠಿಸಿರುವ ಕಾರಣವೇನೆಂದು ವಿವರಿಸಿದರು. ಜನರಿಗೆ ತಪ್ಪು ಗ್ರಹಿಕೆ ಆಗದಿರಲಿ. ಇಸ್ಲಾಮಿನ ಸರಿಯಾದ ತತ್ವಗಳನ್ನು ತಿಳಿಯುವುದರಲ್ಲಿ ಅವರಿಗೆ ತಪ್ಪು ಗ್ರಹಿಕೆ ಆಗದಿರಲಿ ಎಂದು ಅವರು ಬಯಸಿದರು. ಅವರು ಚೆನ್ನಾಗಿ ವಿವರಣೆ ನೀಡಿದರು. ಸಹಾಬರಲ್ಲಿ ಬಹುತೇಕ ಜನರು ಅದನ್ನು ಮನವರಿಕೆ ಮಾಡಿದರು. ಕೆಲವರಿಗೆ ಮನವರಿಕೆ ಆಗದಿದ್ದರೂ ಮೌನವಾಗಿದ್ದರು. ಆದರೆ ಕಲಹ ಪ್ರಿಯರಾದ ಕೆಲವರು ಬೊಬ್ಬೆ ಹಾಕಿದರು. ಕೆಲವರು ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಬಳಿಗೆ ಹೋಗಿ ಹೇಳಿದರು: ಇಂದು ಏನಾಯಿತೆಂದು ತಾವು ನೋಡಿದಿರಲ್ಲವೇ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಗೆ ವರ್ತಿಸುತ್ತಿದ್ದರು. ಆದರೆ ಇಂದು ಹಝ್ರತ್ ಉಸ್ಮಾನ್ ಮಾಡಿದುದಾದರೂ ಏನು? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಜ್ ಸಂದರ್ಭದಲ್ಲಿ ಎರಡು ರಕಅತ್ ಮಾತ್ರ ನಿರ್ವಹಿಸುತ್ತಿದ್ದರು. ಆದರೆ ಇಂದು ಹಝ್ರತ್ ಉಸ್ಮಾನ್ ನಾಲ್ಕು ರಕಅತ್ ಅನುಷ್ಠಿಸಿದರು.

ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಅವರೊಂದಿಗೆ ಹೀಗೆ ಹೇಳಿದರು: ಕಲಹ ಮಾಡುವುದು ನಮ್ಮ ಕೆಲಸವಲ್ಲ. ಏಕೆಂದರೆ ಖಲೀಫರು ಯಾವುದೋ ಔಚಿತ್ಯವನ್ನು ಮನಗಂಡು ಇಂತಹ ರೀತಿ ವರ್ತಿಸಿರಬಹುದು. ಅದು ನಮಗೆ ಅರ್ಥವಾಗದಿರಬಹುದು. ನೀವು ಕಲಹ ಮಾಡಬೇಡಿರಿ. ನಾನು ಸಹ ಖಲೀಫರ ನೇತೃತ್ವದಲ್ಲಿ ನಾಲ್ಕು ರಕಅತ್ ನಮಾಝ್ ನಿರ್ವಹಿಸಿದ್ದೇನೆ. ಆದರೆ ನಮಾಝ್ ನಂತರ ನಾನು ಕೈ ಎತ್ತಿ ಪ್ರಾರ್ಥಿಸಿದೆ: ಓ ಅಲ್ಲಾಹ್, ನೀನು ನನ್ನ ನಾಲ್ಕು ರಕಅತ್‌ಗಳ ಪೈಕಿ ಎರಡು ರಕಅತ್‌ಗಳ ಪುಣ್ಯ ನೀಡು. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನೇತೃತ್ವದಲ್ಲಿ ಎರಡು ರಕಅತ್‌ಗಳನ್ನು ಮಾತ್ರ ನಿರ್ವಹಿಸುತ್ತಿದ್ದೆವು. ಉಳಿದ ಎರಡು ರಕಅತ್‌ಗಳನ್ನು ಪರಿಗಣಿಸುವುದು ಬೇಡ ಎಂದು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದರು ಹೊಂದಿದ ಪ್ರೀತಿ ಎಷ್ಟು ಗಾಢವಾಗಿತ್ತು ಎಂದು ನೋಡಿರಿ. ಅವರು ನಾಲ್ಕು ರಕಅತ್ ನಮಾಝ್ ನಿರ್ವಹಿಸಿದರೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನೇತೃತ್ವದಲ್ಲಿ ನಿರ್ವಹಿಸುತ್ತಿದ್ದ ಎರಡು ರಕಅತ್‌ಗಳಿಗೆ ದೊರಕುವ ಪುಣ್ಯಕ್ಕಿಂತ ಹೆಚ್ಚಿಗೆ ಇಷ್ಟವಿರಲಿಲ್ಲ. ಆದುದರಿಂದ ಪ್ರಾರ್ಥಿಸಿದರು. ನನ್ನ ಎರಡು ರಕಅತ್‌ಗಳ ಪುಣ್ಯ ಮಾತ್ರ ದಯಪಾಲಿಸು. ನಾಲ್ಕು ರಕಅತ್‌ಗಳದ್ದು ಅಲ್ಲ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಪುನಃ ಬರೆಯುತ್ತಾರೆ: ಖಿಲಾಫತನ್ನು ಅನುಸರಿಸುವ ಬಗ್ಗೆ ಎಂತಹ ಉತ್ತಮ ಉದಾಹರಣೆ ಈ ಘಟನೆಯಲ್ಲಿದೆ. ಹಝ್ರತ್ ಉಸ್ಮಾನ್ ನಾಲ್ಕು ರಕಅತ್ ನಮಾಝ್ ಯಾಕೆ ನಿರ್ವಹಿಸಿದರು ಎಂದು ಹಝ್ರತ್ ಇಬ್ನು ಮಸ್‌ಊದರಿಗೆ ತಿಳಿದಿರಲಿಲ್ಲವಾದರೂ ಅವರು ಖಲೀಫರನ್ನು ಅನುಸರಿಸಿದರು. ಸಹಾಬರು ಅವಿದ್ಯಾವಂತರಾಗಿದ್ದರೂ ಇದೇ ಕಾರಣದಿಂದ ಅವರು ಲೋಕದ ಮೇಲೆಲ್ಲಾ ಆವರಿಸಿದರು.

ಒಮ್ಮೆ ಹಝ್ರತ್ ಉಮರ್(ರ) ರಾತ್ರಿ ಹೊತ್ತು ಹೊರಗಿನಿಂದ ಬಂದ ಒಂದು ಗುಂಪು ಜನರನ್ನು ಭೇಟಿಯಾದರು. ಅಂಧಕಾರದ ಕಾರಣದಿಂದ ಆ ಗುಂಪಿನಲ್ಲಿದ್ದ ಜನರನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ. ಆ ಗುಂಪಿನಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಸಹ ಇದ್ದರು. ಆ ಜನರು ಎಲ್ಲಿಂದ ಆಗಮಿಸಿದರೆಂದು ವಿಚಾರಿಸಲು ಒಬ್ಬ ವ್ಯಕ್ತಿಯನ್ನು ಹಝ್ರತ್ ಉಮರ್ ಕಳುಹಿಸಿದರು. ಆ ವ್ಯಕ್ತಿ ಕೇಳಿದ ಪ್ರಶ್ನೆಗಳಿಗೆ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಉತ್ತರ ನೀಡಿದರು. **ಫಜ್ಜಿಲ್ ಅಮೀಖ್** ನಿಂದ ಎಂದರೆ ಬಹಳ ದೂರದ ಮಾರ್ಗದಿಂದ ಆಗಮಿಸಿದ್ದೇವೆ. ಎಲ್ಲಿಗೆ ಹೋಗುತ್ತಿರುವಿರಿ ಎಂದು ಕೇಳಿದಾಗ ಅವರು ಹೀಗೆ ಉತ್ತರ ಹೇಳಿದರು: **ಬೈತಿಲ್ ಅತೀಖ್** ಎಂದರೆ ಕಅಬದ ಕಡೆಗೆ ಎಂದು. ಹಝ್ರತ್ ಉಮರ್ ವಿಚಾರಿಸಿದರು ಆ ಜನರಲ್ಲಿ ವಿದ್ವಾಂಸರಾದ ಯಾರಾದರೂ ಇದ್ದಾರೆಯೇ ಎಂದು. ಅನಂತರ ಹಝ್ರತ್ ಉಮರ್ ಒಬ್ಬನೊಂದಿಗೆ ಹೇಳಿದರು ಉಚ್ಚಧ್ವನಿಯಲ್ಲಿ ಅವರೊಂದಿಗೆ ವಿಚಾರಿಸು: ಪವಿತ್ರ ಖುರ್‌ಆನ್‌ನಲ್ಲಿರುವ ಅತ್ಯಂತ ಮಹತ್ವಪೂರ್ಣ ವಚನ ಯಾವುದೆಂದು. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹೇಳಿದರು: **ಆಯತುಲ್ ಕುರ್‌ಸೀ** ಅತ್ಯಂತ ಮಹತ್ವಪೂರ್ಣ ವಚನವಾಗಿದೆ. ಅನಂತರ ಪ್ರಶ್ನೆ ಕೇಳಲಾಯಿತು. ಪವಿತ್ರ ಖುರ್‌ಆನಿನ ಅತ್ಯಂತ ಮುಹ್‌ಕಮ್ (ಅತ್ಯಂತ ಸ್ಪಷ್ಟ ಆದೇಶವುಳ್ಳ ವಚನ) ಯಾವುದೆಂದು. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹೇಳಿದರು: ಆ ವಚನ **ಇನ್ನಲ್ಲಾಹ ಯಅ್‌ಮುರು ಬಿಲ್ ಅದ್‌ಲಿ ವಲ್ ಇಹ್‌ಸಾನಿ ವಈತಾಯಿಧಿಲ್ ಖುರ್‌ಬಾ.** ಅನಂತರ, ಪವಿತ್ರ ಖುರ್‌ಆನಿನಲ್ಲಿರುವ ಅತ್ಯಂತ ಸಮಗ್ರ ವಚನ ಯಾವುದೆಂದು ಕೇಳಲಾಯಿತು. ಆಗ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹೇಳಿದರು: **ಫಮನ್ ಯಅ್‌ಮಲ್ ಮಿಸ್‌ಖಾಲ ಝರ್ರತಿನ್ ಖೈರನ್ ಯರಹು — ವಮನ್ ಯಅ್‌ಮಲ್ ಮಿಸ್‌ಖಾಲ ಝರ್ರತಿನ್ ಶರ್ರನ್ ಯರಹು.** ಎಂಬ ವಚನವಾಗಿದೆ. ಪವಿತ್ರ ಖುರ್‌ಆನ್‌ನಲ್ಲಿರುವ ಅತ್ಯಂತ ಭಯ ಹುಟ್ಟಿಸುವ ವಚನ ಯಾವುದೆಂದು ಕೇಳಲಾಯಿತು. ಆಗ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹೇಳಿದರು: ಆ ವಚನ ಇದಾಗಿದೆ: **ಲೈಸ ಬಿಅಮಾನಿಯ್ಯಿಕುಮ್ ವಲಾ ಅಮಾನಿಯ್ಯಿ ಅಹ್‌ಲಿಲ್ ಕಿತಾಬ್. ಮನ್ ಯಅ್‌ಮಲ್ ಸೂಅನ್ ಯುಜ್‌ಝು ಬಿಹೀ ವಲಾ ಯಜಿದ್ ಲಹೂ ಮಿನ್‌ದೂನಿಲ್ಲಾಹಿ ವಲಿಯ್ಯನ್ ವಲಾ ನಸೀರ.** ಹಝ್ರತ್ ಉಮರ್ ಫಾರೂಖ್ ಹೇಳಿದರು: ಪವಿತ್ರ ಖುರ್‌ಆನ್‌ನಲ್ಲಿರುವ ಅತ್ಯಂತ ಶುಭ ಪ್ರತೀಕ್ಷೆ ಹುಟ್ಟಿಸುವ ವಚನ ಯಾವುದೆಂದು ಅವರೊಡನೆ ಕೇಳಿರಿ. ಆಗ ಅಬ್ದುಲ್ಲಾ ಬಿನ್ ಮಸ್‌ಊದ್ ಉತ್ತರ ನೀಡಿದರು: ಆ ವಚನ ಇದಾಗಿದೆ: **ಖುಲ್ ಯಾ ಇಬಾದಿಯಲ್ಲದೀನ ಅಸ್‌ರಫೂ ಅಲಾ ಅನ್‌ಫುಸಿಹಿಮ್ ಲಾತಖ್‌ನತೂ ಮಿನ್ ರಹ್ಮತಿಲ್ಲಾಹ್. ಇನ್ನಲ್ಲಾಹ ಯಗ್‌ಫಿರು ಝ್ಝುನೂಬ ಜಮೀಅನ್. ಇನ್ನಹೂ ಹುವಲ್ ಗಫೂರುರ್ರಹೀಮ್.**

ಹಝ್ರತ್ ಉಮರ್ ಈ ಎಲ್ಲಾ ಉತ್ತರಗಳನ್ನು ಆಲಿಸಿದ ನಂತರ ಕೇಳಿದರು: ಆ ಗುಂಪಿನಲ್ಲಿ ಅಬ್ದುಲ್ಲಾ ಬಿನ್ ಮಸ್‌ಊದ್ ಇದ್ದಾರೆಯೋ ಎಂದು ವಿಚಾರಿಸು. ಆಗ ಆ ಗುಂಪಿನ ಜನರು ಹೇಳಿದರು: ಅವರು ನಮ್ಮ ಜೊತೆಗೆ ಇದ್ದಾರೆ. ಆಗ ಹಝ್ರತ್ ಉಮರ್ ಹೇಳಿದರು: ಅಬ್ದುಲ್ಲಾ ಬಿನ್ ಮಸ್‌ಊದ್ ಕರ್ಮಶಾಸ್ತ್ರ ನಿಷ್ಣಾತರಾಗಿದ್ದಾರೆ.

ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಪ್ರತಿ ಗುರುವಾರ ಉಪದೇಶ ನೀಡುತ್ತಿದ್ದರು. ಸಾಯಂಕಾಲದ ಹೊತ್ತು ಅವರು ತನ್ನ ಪ್ರವಚನದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹದೀಸುಗಳ ಪೈಕಿ ಒಂದು ಹದೀಸನ್ನು ಮಾತ್ರ ವಿಶದೀಕರಿಸುತ್ತಿದ್ದರು. ಅವರು ಹದೀಸು ವಿವರಿಸುವಾಗ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರಕಟಿಸುತ್ತಿದ್ದ ಪ್ರೀತಿ ಮತ್ತು ಅಭಿಮಾನ ಭರಿತ ಉತ್ಸಾಹ ಗಮನೀಯವಾಗಿರುತ್ತಿತ್ತು. ಅವರ ಶಿಷ್ಯರಾದ ಮಸ್‌ರೂಖ್ ಹೇಳುತ್ತಾರೆ: ಒಮ್ಮೆ ಅವರು ನಮಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಂದು ಹದೀಸನ್ನು ಕೇಳಿಸಿದರು. ಅವರು ಸಮಿಅ್‌ತು ರಸೂಲಲ್ಲಾಹ್ ನಾನು ಅಲ್ಲಾಹನ ಸಂದೇಶವಾಹಕರಿಂದ ಆಲಿಸಿದೆ ಎಂದು ಹೇಳುವಾಗ ಭಯದಿಂದ ಅವರ ಶರೀರ ಕಂಪಿಸುತ್ತಿತ್ತು. ಅವರ ಬಟ್ಟೆಗಳೂ ಕಂಪಿಸತೊಡಗಿದುವು. ಅವರಿಗೆ ಎಷ್ಟು ದೇವಭಯವಿತ್ತೆಂದರೆ ಅವರು ಹೇಳುತ್ತಿದ್ದರು: ನಾನು ಮೃತನಾದ ನಂತರ ಪುನರುತ್ಥಾನಗೊಳ್ಳುವುದನ್ನು ನಾನು ಇಚ್ಛಿಸುವುದಿಲ್ಲ. ಆ ಮೂಲಕ ನಾನು ಲೆಕ್ಕ ನೀಡುವಿಕೆಯಿಂದ ರಕ್ಷಣೆ ಪಡೆಯುವೆನೆಂದು ಆಶಿಸುತ್ತೇನೆ. ಹಝ್ರತ್ ಅಬ್ದುಲ್ಲಾ ವರದಿ ಮಾಡುತ್ತಾರೆ: ಒಮ್ಮೆ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ರೋಗಿಯಾದಾಗ ಬಹಳ ಭಯಗೊಂಡಿದ್ದರು. ನಾವು ಅವರೊಂದಿಗೆ ಹೇಳಿದೆವು ನೀವು ಇದರ ಮೊದಲು ರೋಗ ಬಾಧಿತರಾಗಿದ್ದಾಗ ಇಷ್ಟು ಭಯವಿಹ್ವಲರಾಗಿರಲಿಲ್ಲ. ಅವರು ಹೇಳಿದರು: ಈಗ ಕಾಯಿಲೆ ಅಚಾನಕವಾಗಿ ನನ್ನನ್ನು ಬಾಧಿಸಿದೆ. ನಾನು ಪರಲೋಕ ಗಮನಕ್ಕೋಸ್ಕರ ಇನ್ನೂ ಸಿದ್ಧತೆ ನಡೆಸಿಲ್ಲ. ಆದುದರಿಂದ ಗಾಬರಿಗೊಂಡಿದ್ದೇನೆ. ಅವರು ತನ್ನ ಮೃತ್ಯು ಬಗ್ಗೆ ಹೇಳಿದರು: ಆ ದಿನ ನನಗೆ ಸುಲಭವಾಗದು. ನಾನು ಮೃತನಾದ ನಂತರ ಪುನರುತ್ಥಾನಗೊಳ್ಳಲು ಇಚ್ಛಿಸುವುದಿಲ್ಲ. ಅವರು ವಸಿಯ್ಯತ್‌ನಲ್ಲಿ ಹೇಳಿದರು: ನನ್ನ ಕಫನ್ ಬಟ್ಟೆಯಾಗಿ ಸಾಮಾನ್ಯ ಚಾದರವನ್ನು ಬಳಸಬೇಕು. ನಾನು ಮೃತನಾದ ನಂತರ ಹಝ್ರತ್ ಉಸ್ಮಾನ್ ಬಿನ್ ಮಝ್‌ಊನರ ಗೋರಿಯ ಬಳಿ ದಫನು ಮಾಡಬೇಕು. ನಂತರ ಅವರು ಮೃತರಾದಾಗ ಹಝ್ರತ್ ಉಸ್ಮಾನ್(ರ) ಅವರ

ನಮಾಝ ಜನಾಝ ನಿರ್ವಹಿಸಿದರು. ಅವರ ಮೃತ ಶರೀರವನ್ನು ಜನ್ನತುಲ್ ಬಖೀಅ್‌ನಲ್ಲಿ ದಫನು ಮಾಡಲಾಯಿತು.

ಇಂದು ನಾನು ಪ್ರಸ್ತಾಪಿಸುವ ಇನ್ನೊಬ್ಬ ಸಹಾಬಿ ಹಝ್ರತ್ ಖದ್ದಾಮ ಬಿನ್ ಮಝ್‌ಊನ್. ಅವರು ಹಝ್ರತ್ ಉಸ್ಮಾನ್ ಬಿನ್ ಮಝ್‌ಊನರ ಸಹೋದರನಾಗಿದ್ದರು. ಹಝ್ರತ್ ಉಮರ್‌ರ ಸಹೋದರಿ ಹಝ್ರತ್ ಸಫಿಯರನ್ನು ಅವರು ವಿವಾಹವಾಗಿದ್ದರು. ಅವರು ಮುಸ್ಲಿಮರಾಗುವಾಗ ಅವರ ಪ್ರಾಯ 19 ಆಗಿತ್ತು. ಮದೀನಕ್ಕೆ ಅವರ ಕುಟುಂಬ ಮಕ್ಕದ ತಮ್ಮ ಮನೆಯನ್ನು ತ್ಯಜಿಸಿ ವಲಸೆ ಹೋಗಿತ್ತು. ಮದೀನದಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ಸಲ್ಮಾ ಅಜ್‌ಲಾನಿ ಆ ಕುಟುಂಬವನ್ನು ತನ್ನ ಅತಿಥಿಗಳಾಗಿ ಸ್ವಾಗತಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದಿಂದ ಮದೀನಕ್ಕೆ ವಲಸೆ ಹೋದಾಗ ಅವರು ಹಝ್ರತ್ ಖದ್ದಾಮ ಮತ್ತು ಅವರ ಸಹೋದರರಿಗೆ ಸ್ಥಿರ ವಾಸಕ್ಕೋಸ್ಕರ ನಿವೇಶನಗಳನ್ನು ನೀಡಿದರು. ಹಝ್ರತ್ ಖದ್ದಾಮ ಆರಂಭ ಕಾಲದ ಮುಸ್ಲಿಮರಲ್ಲಿ ಸೇರಿದವರಾಗಿದ್ದಾರೆ. ಅವರು ಅಬಿಸೀನಿಯಾ ಕಡೆಗೆ ಮತ್ತು ಅನಂತರ ಮದೀನದ ಕಡೆಗೆ ಹಿಜ್‌ರತ್ ಮಾಡಿದರು. ಅವರು ಬದರ್, ಉಹುದ್ ಮತ್ತು ಎಲ್ಲಾ ಯುದ್ಧಗಳಲ್ಲಿ ಹೋರಾಡಿದ್ದರು. ಅವರು ಹಿಜರಿ 36ರಲ್ಲಿ ತನ್ನ 68ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು.

ಧರ್ಮದ ಜ್ಞಾನಗಳಿಸಿದ, ಅನುಸರಣೆ ದೋರುವವರಾಗಿ ಆದರ್ಶಪ್ರಿಯರಾಗಿದ್ದ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುತ್ತಿದ್ದ ಉನ್ನತ ಮಟ್ಟವನ್ನು ತಲಪಿದ ಈ ಮಹಾನುಭವರನ್ನು ಅನುಸರಿಸಿ ನಡೆಯುವ ಭಾಗ್ಯವನ್ನು ಅಲ್ಲಾಹು ನಮಗೆ ದಯಪಾಲಿಸಲಿ. ಪ್ರತಿಯೊಂದು ರೀತಿಯ ಪಿತೂರಿಯ ಭಾಗವಾಗುವುದರಿಂದ ನಮ್ಮನ್ನು ಯಾವಾಗಲೂ ಅಲ್ಲಾಹನು ರಕ್ಷಿಸಲಿ – ಆಮೀನ್.

ಜುಮುಅ ನಮಾಝ್ ನಂತರ ಇಬ್ಬರ ಜನಾಝ ಗಾಯಿಬ್ ನಮಾಝ್ ನಿರ್ವಹಿಸುವೆನು. ಮೊದಲನೆಯದು, ಮುಕರ್ರಮ ಅಮತುಲ್ ಹಫೀಝ್ ಭಟ್ಟಿ ಸಾಹಿಬ. ಮಹ್‌ಮೂದ್ ಭಟ್ಟಿ ಸಾಹಿಬ್ ಕರಾಚಿಯವರ ಪತ್ನಿ. ಅವರು ದೀರ್ಘಕಾಲ ಕರಾಚಿ ಜಿಲ್ಲೆಯ ಸದರ್ ಲಜ್‌ನ ಆಗಿದ್ದರು. ಅವರು 2018 ಸೆಪ್ಟೆಂಬರ್ 27ರಂದು 93ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರ ಪಿತ ಡಾಕ್ಟರ್ ಗುಲಾಮ್ ಅಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿ ಆಗಿದ್ದರು. 1936ರಿಂದ ಅವರು ಖಾದಿಯಾನಿನ ಧಾರ್ಮಿಕ ಪರಿಸರದಲ್ಲಿ ಜೀವಿಸುತ್ತಿದ್ದರು. 1948ರಲ್ಲಿ ವಿವಾಹದ ನಂತರ ಕರಾಚಿಗೆ ಆಗಮಿಸಿದ ಕೂಡಲೆ ಲಜ್‌ನಕ್ಕೆ ಸೇವೆ ಸಲ್ಲಿಸಲು ಪ್ರಾರಂಭಿಸಿದರು. 1972ರಲ್ಲಿ ಸಿಂಧ್ ಯುನಿವರ್ಸಿಟಿಯಿಂದ ಅರಬಿ ಭಾಷೆಯಲ್ಲಿ ಎಂ.ಎ. ಬಿರುದು ಗಳಿಸಿದರು. ಅವರು ತಹ್‌ರೀಕ್ ಜದೀದಿನ ಐದು ಸಾವಿರ ಮುಜಾಹಿದರಲ್ಲಿ ಸೇರಿದ್ದರು. ಅಲ್ಲಾಹನು ಅವರಿಗೆ ಕಾರುಣ್ಯ ಮತ್ತು ಕ್ಷಮೆ ದಯಪಾಲಿಸಲಿ. ಅವರ ಪದವಿ ಉನ್ನತ ಗೊಳಿಸಲಿ. ಅವರ ಮಕ್ಕಳು ಸಹ ಅವರ ಹೆಜ್ಜೆ ಗುರುತುಗಳನ್ನು ಅನುಸರಿಸಿ ನಡೆಯುವಂತೆ ಭಾಗ್ಯ ನೀಡಲಿ.

ಎರಡನೆಯ ಜನಾಝ ಅದ್‌ನಾನ್ ವೇನಿನ್ ಬರೂಕ್ ಸಾಹಿಬರದಾಗಿದೆ. ಅವರು ಬೆಲ್‌ಜಿಯಂ ಜಮಾಅತಿನ ನೇಶನಲ್ ಸೆಕ್ರೆಟರಿ ಉಮೂರೆ ಖಾರಿಜ ಆಗಿದ್ದರು. ಸೆಪ್ಟೆಂಬರ್ 29ರಂದು ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರ ಪಿತ ರಿಝ್ವಾನ್ ವೇನಿನ್ ಬರೂಕ್ ಸಾಹಿಬ್ ಪ್ರಥಮ ಬೆಲ್‌ಜಿಯನ್ ಅಹ್ಮದಿ ಆಗಿದ್ದರು. ಅವರು ಅರುವತ್ತರ ದಶಕದಲ್ಲಿ ಬೈಅತ್ ಮಾಡಿದ್ದರು. ಅದ್‌ನಾನ್ ಸ್ವತಃ ಸಂಶೋಧನೆ ನಡೆಸಿ 1994ರಲ್ಲಿ ಬೈಅತ್ ಮಾಡಿದರು. 1998ರಲ್ಲಿ ಬೆಲ್‌ಜಿಯಂನಲ್ಲಿ ಒಂದು ತಬ್ಲೀಗ್ ಸಭೆಯಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಅದ್‌ನಾನ್ ಸಾಹಿಬರ ಬಗ್ಗೆ ಹೇಳಿದರು: ನನ್ನ ಹತ್ತಿರ ಎಂತಹ ಒಬ್ಬ ಭಾಷಾಂತರಕಾರರಿದ್ದಾರೆಂದರೆ ಅವರು ಇಂಗ್ಲಿಷ್‌ನಿಂದ ಫ್ರೆಂಚ್ ಭಾಷೆಗೂ ಡಚ್ ಭಾಷೆಗೂ ಭಾಷಾಂತರ ಮಾಡಬಲ್ಲವರಾಗಿದ್ದಾರೆ. ಅದ್‌ನಾನ್ ಸಾಹಿಬರ ತಾಯಿ ಹೇಳುತ್ತಾರೆ: ಅದ್‌ನಾನ್‌ರ ಪಿತರಿಗೆ ಲೌಕಿಕ ವಸ್ತುಗಳ ಬಗ್ಗೆ ಆಸಕ್ತಿ ಇರಲಿಲ್ಲ. ಅದೇ ರೀತಿ ನನ್ನ ಪುತ್ರ ಅದ್‌ನಾನ್ ಸಹ ತನ್ನ ಪಿತನ ಹೆಜ್ಜೆ ಗುರುತುಗಳನ್ನು ಅನುಸರಿಸಿ ಚಲಿಸುವವರಾಗಿದ್ದರು. ನಮಾಝ್‌ಗಳ ಬಗ್ಗೆ ಬದ್ಧತೆ ಹೊಂದಿದವರೂ ಜಮಾಅತಿಗೆ ಸೇವೆ ಸಲ್ಲಿಸುವವರೂ ಖಿಲಾಫತ್‌ನೊಂದಿಗೆ ನಿಷ್ಠೆ ಹೊಂದಿದವರೂ ಪ್ರತಿ ಶುಕ್ರವಾರ ಖುತ್‌ಬ ಜುಮುಅ ಆಲಿಸುವವರೂ ಮಕ್ಕಳಿಗೆ ಕೇಳಿಸುವವರೂ ಆಗಿದ್ದರು. ಅವರು ಜಮಾಅತ್‌ಗೆ ಸೇವೆ ಸಲ್ಲಿಸಲು ಪ್ರತಿ ಸಮಯ ಸಿದ್ಧರಾಗಿರುತ್ತಿದ್ದರು. ಖಿಲಾಫತ್‌ನೊಂದಿಗೆ ಅವರಿಗೆ ಗಾಢವಾದ ಸಂಬಂಧವಿತ್ತು. ಅಲ್ಲಾಹನು ಅವರ ಪದವಿ ಉನ್ನತ ಗೊಳಿಸಲಿ. ಅವರಿಗೆ ಕಾರುಣ್ಯ ಮತ್ತು ಕ್ಷಮೆ ದಯಪಾಲಿಸಲಿ. ಜಮಾಅತಿಗೆ ಇಂತಹ ಜೀವಾರ್ಪಣೆ ಮಾಡುವವರು ದೊರಕುತ್ತಾ ಇರಲಿ. ಅವರು ಪತ್ನಿ, ಒಬ್ಬ ಪುತ್ರ ಮತ್ತು ಒಬ್ಬ ಪುತ್ರಿಯನ್ನು ಅಗಲಿ ಹೋಗಿದ್ದಾರೆ. ಅಲ್ಲಾಹನು ಅವರನ್ನು ಧಾರ್ಮಿಕ ಶ್ರದ್ಧೆಯುಳ್ಳವರೂ ದೃಢವಿಶ್ವಾಸಿಗಳಾಗಿಯೂ ಮಾಡಲಿ. ತಮ್ಮ ತಂದೆಯವರ ಹೆಜ್ಜೆ ಗುರುತಿನಲ್ಲಿ ಚಲಿಸುವ ಭಾಗ್ಯ ಅವರಿಗೆ ದಯಪಾಲಿಸಲಿ – ಆಮೀನ್.

——————*****——————


***Friday Sermon delivered by Hadrath Khaleefatul Masih Al Khamis***(atba)

*At,Masjid Baithul Futhuh, London. On05-10-2018.*

**Summarized by***Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email***:*khutuba.kannada@gmail.com*



**You can find all the Sermons archived at**: www.alislam.org/friday-sermon